46.	Ramanathan	Rs. 95,000.00
47.	Shashidhar Puttraya	Rs. 82,000.00
48.	M.H. Vasudha	Rs. 48,000.00
49.	P. gopala Krishna	Rs. 2,18,000.00
50.	Devaki	Rs. 40,000.00
51.	K.V. Indra	Rs. 1,14,500.00
52.	K.V. Rajani	Rs. 30,000.00
53.	R. Asha & Bhagiratha Rao	Rs. 20,000.00
54.	C.C. Narayana Rao	Rs. 32,000.00
55.	Ashwini	Rs. 30,000.00
56.	Iswaraya	Rs. 15,000.00
57.	G.N. Ganapathaiah	Rs. 1,38,000.00
58.	T.R. Sunanda	Rs. 17,000.00
59.	C.S. Ranganth	Rs. 15,000.00
60.	C.S. Vishveshwaraiah	Rs. 1,03,000.00
61.	Sujatha	Rs. 55.000.00
	Total	**Rs. 33,59,958.00**

ಮಂಡ್ಯ ನಗರ ಒಳಚರಂಡಿ ವ್ಯವಸ್ಥೆ

2027 (2479) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಕ್ಕೆ ಮೊದಲನೇ ಹಂತದ ಒಳಚರಂಡಿ ಯೋಜನೆ ಮಂಜೂರಾಗಿ ಟ್ರೀಟ್‌ಮೆಂಟ್ ಪ್ಲಾಂಟ್‌ನ (Water Treatment plant) ಕಾಮಗಾರಿ ಹಾಕಿ ಉಳಿದಿರುವುದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಾ ಇರುವುದನ್ನು ಸರ್ಕಾರವು ಗಮನಿಸಿದೆಯೇ?

ಆ) ಹಾಗಿದ್ದಲ್ಲಿ ಮೊದಲನೇ ಹಂತದ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಇ) ಮಂಡ್ಯ ನಗರಕ್ಕೆ ಸರ್ಕಾರವು 2ನೇ ಹಂತದ ಒಳಚರಂಡಿ ಕಾಮಗಾರಿಯನ್ನು ಮಂಜೂರು ಮಾಡಿ ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳೇನು? (ವಿವರಗಳನ್ನು ಒದಗಿಸುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಯವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಅ) ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು 1995 ರಲ್ಲಿ ಚಾಲನೆಗೊಳಿಸಲಾಗಿದೆ. ಟ್ರೀಟ್‌ಮೆಂಟ್ ಪ್ಲಾಂಟ್‌ನ ಕಾಮಗಾರಿಯನ್ನು 2ನೇ ಹಂತದ ಒಳಚರಂಡಿ ಕಾಮಗಾರಿಯಲ್ಲಿ ತೆಗೆದುಕೊಳ್ಳಲಾಗುವುದು.

ಇ) ಮಂಡ್ಯ ನಗರದ 2ನೇ ಹಂತದ ಒಳಚರಂಡಿ ಯೋಜನೆಯು ರೂ. 1429.69 ಲಕ್ಷಗಳಿಗೆ ಮಂಜೂರಾಗಿದ್ದು ಯೋಜನೆಯ ಆರ್ಥಿಕ ಮಾದರಿಯು ಕೆಳಕಂಡಂತಿದೆ.

ಹುಡ್ಕೋದಿಂದ ಸಾಲ ಶೇ. 50	ರೂ. 714.845 ಲಕ್ಷ
ಸರ್ಕಾರದಿಂದ ಸಾಲ ಶೇ. 25	ರಕೂ. 347.4225 ಲಕ್ಷಗಳು
ಸ್ಥಳೀಯ ಸಂಸ್ಥೆಗಳಿಂದ ವಂತಿಕೆ ಶೇ. 25	ರೂ.357.4225 ಲಕ್ಷಗಳು

ಸರ್ಕಾರಿ ಆದೇಶದ ಪ್ರಕಾರ ಈ ಯೋಜನೆಯ ಕಾಮಗಾರಿಯು ಪ್ರಾರಂಭವಾಗುವುದಕ್ಕೆ ಮುಂಚಿ ನಗರಸಭೆಯು ತನ್ನ ಪಾಲಿನ 1 3 ಭಾಗ (ರೂ 9.15 ಲಕ್ಷಗಳು) ವಂತಿಕೆಯನ್ನು ಠೇವಣಿಸಬೇಕು ಆದರೆ ಈವರೆವಿಗೂ ಯಾವುದೇ ಮೂಲದಿಂದ ಆರ್ಥಿಕ ವ್ಯವಸ್ಥೆ ಆಗಿರುವುದಿಲ್ಲ. ಅದಾಗ್ಯೂ ಈಗಾಗಲೇ ಗ್ರಾಮಸಾರ ಕೊಳವೆ ಮಾರ್ಗಗಳನ್ನು ಹಾಗೂ ಅಳುಗುಂಡಿಗಳನ್ನು ನಿರ್ಮಿಸುವ ಕಾಮಗಾರಿಗಳಿಗೆ ರೂ. 668.00 ಲಕ್ಷಗಳ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನಿಯಮಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ದೀರ್ಘಾವಧಿ ಶಿಕ್ಷೆ ಅನುಭವಿಸುತ್ತಿರುವ ಸನ್ನಡತೆಯ ಖೈದಿಗಳಿಗೆ ಕ್ಷಮದಾನ

2028 (2480) - ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ) : ಮಾನ್ಯ ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಎಂಟರಿಂದ ಹತ್ತು ವರ್ಷಕ್ಕೂ ಮೇಲ್ಪಟ್ಟು ಕಾರಾಗೃಹ ಶಿಕ್ಷೆ ಅನುಭವಿಸುತ್ತಾ ಇರುವ ಖೈದಿಗಳ ಸಂಖ್ಯೆ ಎಷ್ಟು?

ಆ) ದೀರ್ಘಾವಧಿ ಕಾರಾಗೃಹ ವಾಸ ಶಿಕ್ಷೆ ಅನುಭವಿಸುತ್ತಿರುವ ಸನ್ನಡತೆಯ ಖೈದಿಗಳಿಗೆ ರಾಷ್ಟ್ರೀಯ ಸನ್ನಡತೆಯ ಖೈದಿಗಳಿಗೆ ರಾಷ್ಟ್ರೀಯ ದಿನಗಳು ಮತ್ತು ನಾಡಹಬ್ಬಗಳಂದು ಕ್ಷಮಾದಾನವನ್ನು ನೀಡುವ ಪರಿಪಾಠವಿದ್ದಲ್ಲಿ ಈವರೆಗೆ ಬಿಡುಗಡೆಯಾಗಿರುವ ಖೈದಿಗಳ ಸಂಖ್ಯೆ ಎಷ್ಟು?

ಇ) ಪ್ರಸಕ್ತ ಸಾಲಿನಲ್ಲಿ ಈ ರೀತಿ ಏನಾದರೂ ಬಿಡುಗಡೆ ಮಾಡಲಾಗಿದೆಯೇ

ಈ) ಮಾಡದಿದ್ದಲ್ಲಿ ಸರ್ಕಾರವು ಈ ಬಗ್ಗೆ ಏನಾದರೂ ಆಲೋಚನೆ ಮಾಡುವುದೇ

ಶ್ರೀ ರಾಜ ಅಮೇಶ್ವರ ನಾಯಕ್ (ಬಂದೀಖಾನೆ ಸಚಿವರು):

ಅ) 237

ಆ) ದೀರ್ಘಾವಧಿ ಕರಾಗೃಹವಾಸ ಅನುಭವಿಸಿದ ಹಾಗೂ ಇತರೆ ಸನ್ನಡತೆಯ ಕೈದಿಗಳಿಗೆ ಈ ಹಿಂದೆ ಭಾರತದ ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಹಾಗೂ ಭಾರತದ ಗಣರಾಜ್ಯ: ಸುವರ್ಣ ಮಹೋತ್ಸವದ ಅಂಗವಾಗಿ ಕ್ಷಮಾದಾನ ನೀಡಿ ಒಟ್ಟು 5 ಬಾರಿ ಅಕಾಲಿಕ ಬಿಡುಗಡೆ ಮಾಡಲಾಗಿದ್ದು ವಿವರ ಕೆಳಕಂಡಂತಿದೆ.